**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ : 91/2020</u>**

**ಚಾ.ಸಾಃ 10, ಫ್ರಾ.ಸಾಃ 06**

| | |
|---|---|
| ಸಾಕ್ಷಿದಾರನ ಹೆಸರು | ಸುರೇಶ ನಾಯ್ಕ |
| ತಂದೆಯ ಹೆಸರು | ನಾರಾಯಣ ನಾಯ್ಕ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಕಡತೋಕಾ, ಜಡ್ಡಿಗದ್ದೆ |

**<u>ಸಾಕ್ಷಿಯನ್ನು ದಿನಾಂಕಃ 19-05-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನನ್ನ ವಾಸದ ಮನೆಯು ಜಡ್ಡಿಗದ್ದೆಯಲ್ಲಿದ್ದ ಅಲ್ಲಿ ನಾನು, ನನ್ನ ಹೆಂಡತಿ ಮತ್ತು ಮಗಳ ಜೊತೆ ವಾಸ ಮಾಡುತ್ತಿದ್ದು ನನ್ನ ಮಗಳು ವಿವಾಹವಾದ ಬಳಿಕ ತನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ನನ್ನ ಹೆಂಡತಿ ಜಡ್ಡಿಗದ್ದೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಡಿಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾಳೆ.

ದಿನಾಂಕ 29-05-2019 ರಂದು ಬೆಳಿಗ್ಗೆ 09-30 ರ ಸಮಯಕ್ಕೆ ನನ್ನ ಹೆಂಡತಿಯಾದ ಚಾಸಾ-1 ಬಿಸಿ ಊಟದ ಅಡುಗೆ ಮಾಡಲು ಜಡ್ಡಿಗದ್ದೆಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗೆ ಹೋಗಿದ್ದಳು. ನಾನು ಬೆಳಿಗ್ಗೆ 09-45 ರ ಸಮಯಕ್ಕೆ ಕೆಕ್ಕಾರದಲ್ಲಿರುವ ನನ್ನ ಮಾವನ ಮನೆಗೆ ಕೆಲಸಕ್ಕೆ ಹೋಗಿದ್ದೆ. ಕೆಲಸಕ್ಕೆ ಹೋಗುವ ಮೊದಲು ನಾನು ಮನೆಯ ಬಾಗಿಲನ್ನು ಮುಚ್ಚಿ ಮನೆಯ ಮುಂದಿನ ಬಾಗಿಲಿಗೆ ಮತ್ತು ಅದರ ಮುಂದೆ ಇದ್ದ ಕಬ್ಬಿಣದ ಗ್ರೀಲ್ಸಗೆ ಬೀಗಗಳನ್ನು ಹಾಕಿದ್ದೆ. ಸದರಿ ದಿನ ರಾತ್ರಿಯಾದ್ದರಿಂದ ನಾನು ಮಾವನ ಮನೆಯಲ್ಲೇ ಉಳಿದೆ. ನನ್ನ ಹೆಂಡತಿ ಸಹ ಕೆಲಸವನ್ನು ಮುಗಿಸಿ ತನ್ನ ತವರು ಮನೆಗೆ ಬಂದಿದ್ದಳು.

ದಿನಾಂಕ 30-05-2019 ರಂದು ನಾನು ಮತ್ತು ನನ್ನ ಹೆಂಡತಿ ಬೆಳಿಗ್ಗೆ 09-30 ರ ಸಮಯಕ್ಕೆ ನಮ್ಮ ಮನೆಗೆ ಬಂದು ನೋಡಲಾಗಿ ಗ್ರೀಲ್ಸಗೆ ಮತ್ತು ಮುಂದಿನ ಬಾಗಿಲಿಗೆ ಹಾಕಿದ್ದ ಬೀಗಗಳನ್ನು ಒಡೆಯಲಾಗಿತ್ತು. ನಾವು ಮನೆಯೊಳಗೆ ಹೋಗಿ ನೋಡಲಾಗಿ ಮಲಗುವ ಕೋಣೆಯಲ್ಲಿ ಇದ್ದ ಕಪಾಟು ತೆರೆದಿತ್ತು. ಸದರಿ ಕಪಾಟಿನೊಳಗೆ ಮತ್ತೊಂದು ಸಣ್ಣ ಕಪಾಟು ಇದ್ದು ಅದರಲ್ಲಿ ಒಂದು ಸಣ್ಣ ಪರ್ಸನ್ನು ಇಟ್ಟಿದ್ದೆವು. ಸದರಿ ಸಣ್ಣ ಪರ್ಸನಲ್ಲಿ ಒಂದು ಬಂಗಾರದ ನೆಕ್ಲೇಸ್, ಒಂದು ಬಂಗಾರದ ಕರಿಮಣಿ ಸರ, ಲಾಕೇಟು ಇದ್ದ ಒಂದು ಬಂಗಾರದ ಚೈನು, ಬಂಗಾರದ ಕೈ-ಬೆರಳು ಉಂಗುರಗಳು, ಕಿವಿಗೆ ಹಾಕುವ ಒಂದು ಜೊತೆ ಜುಮುಕಿ, ಕುಡುಕು ಮತ್ತು ಸರಪಳಿ ಮತ್ತು ರೂ.1,000/- ನಗದನ್ನು ಇಟ್ಟಿದ್ದೆವು. ಆದರೆ ಅವುಗಳು ಇರಲ್ಲಿಲ್ಲ. ಅವುಗಳನ್ನು ಯಾರೋ ಕಳ್ಳತನ ಮಾಡಿರುವುದಾಗಿ ನನಗೆ ಕಂಡು ಬಂದಿರುತ್ತದೆ. ಸದರಿ ವಿಚಾರವನ್ನು ನಾನು ಅದೇ ದಿನ ಪೋಲಿಸರು ತಿಳಿಸಿರುತ್ತೇವೆ. ಪಿರ್ಯಾದನ್ನು ನನ್ನ

ಹೆಂಡತಿ ನೀಡಿರುತ್ತಾಳೆ. ಘಟನೆ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಅವರಿಗೆ ಹೇಳಿಕೆ ನೀಡಿರುತ್ತೇನೆ.

ದಿನಾಂಕ 04-08-2020 ರಂದು ಪೋಲಿಸರು ಸಜ್ಜದ್ ಮತ್ತು ಮುಬಾಸಿರನನ್ನು ನಮ್ಮ ಮನೆಯ ಬಳಿ ಕರೆತಂದು ಬಾಗಿಲ ಬಳಿ ನಿಲ್ಲಿಸಿದ್ದರು. ನಾವು ಅವರನ್ನು ಕೇಳಿದೆವು. ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡು ಕಳ್ಳತನ ಮಾಡಿದ ರೀತಿಯನ್ನು ತೋರಿಸಿದರು. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ಗುರುತಿಸಿದ್ದು, ಗೈರು ಹಾಜರಿರುವ 2 ನೇ ಆರೋಪಿಯ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ಆಭರಣಗಳನ್ನು ತೋರಿಸುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಪೋಲಿಸರು ನಮ್ಮ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ಪೋಲಿಸರು ಠಾಣೆಯಲ್ಲಿ 1. ಒಂದು ಬಂಗಾರದ ನೆಕ್ಲೇಸ್, 2. ಒಂದು ಬಂಗಾರದ ಕರಿಮಣಿ ಸರ, 3.ಲಾಕೇಟು ಇದ್ದ ಒಂದು ಬಂಗಾರದ ಚೈನು, 4. ಬಂಗಾರದ ಕೈ-ಬೆರಳು ಉಂಗುರಗಳು, 5.ಕಿವಿಗೆ ಹಾಕುವ ಒಂದು ಜೊತೆ ಜುಮುಕಿ, ಕುಡುಕು ಮತ್ತು ಸರಪಳಿಯನ್ನು ತೋರಿಸಿದ್ದರು. ಅವುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸದರಿ ಆಭರಣಗಳನ್ನು ಈಗಾಗಲೇ ಮುಮಾ-1 ರಿಂದ 5 ಎಂದು ಗುರುತಿಸಲಾಗಿದ್ದು ಅವುಗಳ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಮನೆಯ ಮುಂದಿನ ಬಾಗಿಲು ಮತ್ತು ಗ್ರಿಲ್ಸಗೆ ಹಾಕಿದ್ದ ಬೀಗಗಳು ನಾವು ಬಂದು ನೋಡಿದಾಗ ಇರಲಿಲ್ಲ. ನೆಲದ ಮೇಲೆ ಸಹ ಅವುಗಳು ಇರಲಿಲ್ಲ. ಆಭರಣಗಳನ್ನು ಇಟ್ಟಿದ್ದ ಚಿಕ್ಕ ಪರ್ಸ್ ಸಹ ಇರಲಿಲ್ಲ. ಪೋಲಿಸರು ಮಧ್ಯಾಹ್ನ 02-30 ರ ಸಮಯಕ್ಕೆ ಬಂದು ಸುಮಾರು ಒಂದು ತಾಸು ಇದ್ದರು.

ದಿನಾಂಕ 04-08-2020 ರಂದು ಪೋಲಿಸರು ಬರುವ ಪೂರ್ವದಲ್ಲಿ ನಮಗೆ ತಿಳಿಸಿರುವುದಿಲ್ಲ. ಸದರಿ ದಿನದಂದು 2 ಜೀಪುಗಳಲ್ಲಿ ಸುಮಾರು 10 ಜನ ಬಂದಿದ್ದರು. ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಮಾತ್ರ ಇದ್ದೆವು. ನಾನು ಕೇಳಿದಾಗ ನಾವೇ ಕಳ್ಳತನ ಮಾಡಿದ್ದೇವೆ ಎಂದು ಆರೋಪಿಗಳು ನನಗೆ ತಿಳಿಸಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಆಭರಣಗಳನ್ನು ನಮ್ಮ ಮನೆಯ ಬಳಿ ಆರೋಪಿಗಳು ಅಥವಾ ಪೋಲಿಸರು ನನಗೆ ತೋರಿಸಿರುವುದಿಲ್ಲ.

ಮರುದಿನ ಠಾಣೆಗೆ ಎಷ್ಟು ಸಮಯಕ್ಕೆ ಬಂದಿದ್ದೆ ಎನ್ನುವುದು ನೆನಪಿಲ್ಲ.

ದಿನಾಂಕ 05-08-2020 ರಂದು ನಾನು ಠಾಣೆಯಲ್ಲಿ ಆರೋಪಿಗಳನ್ನು ನೋಡಿರುವುದಿಲ್ಲ. ಸದರಿ ದಿನದಂದು ಪೋಲಿಸರು ನನ್ನ ಮುಂದೆ ಆಭರಣಗಳನ್ನು ತೂಕ ಮಾಡಿಸಿರುವುದಿಲ್ಲ ಮತ್ತು ಮೌಲ್ಯಮಾಪನ ಮಾಡಿಸಿರುವುದಿಲ್ಲ.

ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆತಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಆದ ಕಳ್ಳತನಕ್ಕೆ ಮತ್ತು ಆರೋಪಿಗಳಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**